

ಎಸ್ಸೆಸ್ಸೆಲ್ಸಿಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಹುಡುಗ ಶ್ರೀನಾಥ್. ಹತ್ತನೇ ಇಯತ್ತೆಯವರೆಗೆ ಜಾಣ ವಿದ್ಯಾರ್ಥಿ ಎನ್ನಿಸಿಕೊಂಡಿದ್ದವನು, ಮೊದಲನೇ ವರ್ಷದ ಪಿಯುಸಿಗೆ ಬಂದದ್ದೇ ಓದುವುದನ್ನೇ ನಿಲ್ಲಿಸಿಬಿಟ್ಟಿದ್ದ. 'ಯಾಕೆ ಹೀಗಾಯಿತು?' ಎನ್ನುವುದು ಅವನ ಪೋಷಕರ ಚಿಂತೆ. ಅಮ್ಮ–ಅಪ್ಪ ಇಬ್ಬರೂ ಸೇರಿ ಕಾಲೇಜಿಗೆ ಹೋಗಿ ಉಪನ್ಯಾಸಕರ ಬಳಿ ಮಾತನಾಡಿದರು. ಪ್ರತಿ ದಿನವೂ ಮಗನ ಓದುವಿಕೆಯ ಮೇಲೆ ಗಮನವಿಟ್ಟರು. ಆದರೂ ಏಕಾಗ್ರತೆಯಿಲ್ಲದೆ, ಏನನ್ನಾದರೂ ಓದುವುದು ಸಾಧ್ಯವೇ ಇಲ್ಲವೇನೋ ಎಂಬಂತೆ ಶ್ರೀನಾಥ್ ವರ್ತಿಸುತ್ತಿದ್ದ. ಅಂಕಗಳೆಲ್ಲ ಇಳಿಮುಖ ಆಗುತ್ತಾ ಬಂದಿದ್ದವು. ಬಹುಶಃ ಮೊಬೈಲ್ ಚಟದ ಕಾರಣದಿಂದಲೇ ಮಗನ ಓದು ಹಳ್ಳ ಹಿಡಿದಿರಬೇಕು ಎಂದುಕೊಂಡ ಪೋಷಕರು, ಶ್ರೀನಾಥನನ್ನು ಸಮಾಲೋಚಕರ ಬಳಿ ಕರೆದೊಯ್ಯಲು ನಿರ್ಧರಿಸಿದರು. 'ಒಳ್ಳೆಯ ಸಮಾಲೋಚಕರು' ಎಂದು ಪ್ರಸಿದ್ಧರಾದ ಸಮಾಲೋಚಕರೊಬ್ಬರ ಬಳಿ ಹೋಗಲು ನಿರ್ಧರಿಸಿದರು.

ಮಕ್ಕಳನ್ನು ಮನಶ್ಶಾಸ್ತ್ರಜ್ಞರ ಬಳಿಗೆ ಕರೆದೊಯ್ಯುವುದು ಪೋಷಕರ ಪಾಲಿಗೆ ಒಂದು ದೊಡ್ಡ ಸವಾಲು. ಶ್ರೀನಾಥನ ಅಮ್ಮನ ಎದೆಬಡಿದುಕೊಳ್ಳುತ್ತಿತ್ತು. ಇಂದೇನೋ, ಮಗನನ್ನು ಸಂಭಾಳಿಸಿಕೊಂಡು ಆಪ್ತ ಸಮಾಲೋಚಕರ ಬಳಿಗೆ ಕರೆದೊಯ್ಯಬಹುದು. ಆದರೆ ಅಲ್ಲಿನ ವಾತಾವರಣ ಹೇಗೋ ಎಂತೋ? ಮುಂದೊಂದು ದಿನ ಅವನು, ಈ ಬಗ್ಗೆ ಯೋಚಿಸಿ ತನ್ನ ಅಪ್ಪ–ಅಮ್ಮನ ನಡೆಯ ಬಗ್ಗೆ ನೊಂದುಕೊಳ್ಳಬಹುದೇನೋ ಎಂಬೆಲ್ಲ ಅಡ್ಡ ಯೋಚನೆಗಳು ಹಾದು ಹೋಗುತ್ತಿದ್ದವು. ಕೊನೆಗೆ ಅಪ್ಪನೇ ಮಗನ ಬಳಿ ಮಾತಿಗೆ ತೊಡಗಿದರು.

'ಒಳ್ಳೆಯ ಅಂಕಗಳನ್ನು ಗಳಿಸುವುದು ಹೇಗೆ ಎಂಬ ಬಗ್ಗೆ ನನ್ನ ಸ್ನೇಹಿತರೊಬ್ಬರು ಹಲವು ಕಡೆಗಳಲ್ಲಿ ಉಪನ್ಯಾಸ ಕೊಡುತ್ತಿದ್ದಾರೆ. ಅವರು ನನ್ನ ಸ್ನೇಹಿತರೇ ಆದ್ದರಿಂದ ನೀನು ಅವರೊಡನೆ ಮಾತನಾಡಿದರೆ ನಿನಗೂ ಕೆಲವು ಟಿಪ್ಸ್ ಕೊಡಬಹುದು...' ಎಂದು ಹೇಳಿದ ಅಪ್ಪ, ಶ್ರೀನಾಥನ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು. ತನ್ನನ್ನು ಮಾನಸಿಕ ತಜ್ಞರ ಬಳಿ ಕರೆದೊಯ್ಯುತ್ತಿದ್ದಾರೆ ಎಂಬ ಭಾವನೆ ಮಗನ ಮನಸ್ಸಿನಲ್ಲಿ ನುಸುಳದೇ ಇರಲಿ ಎಂಬ ಕಾಳಜಿ ಅಪ್ಪನದ್ದಾಗಿತ್ತು. ಅಪ್ಪನ ಮಾತಿಗೆ ಶ್ರೀನಾಥ್ ವಿರೋಧ ವ್ಯಕ್ತಪಡಿಸಲಿಲ್ಲ. 'ಹೌದು, ಒಳ್ಳೇ ಮಾರ್ಕ್ಸ್ ಪಡೆಯುವ ಆಸೆಯಿದೆ ನನಗೆ...' ಎನ್ನುತ್ತಾ ಅವರ ಸಲಹೆಯನ್ನು ಒಪ್ಪಿದ. ನಂತರದಲ್ಲಿ ಸಮಾಲೋಚನೆಗೆ ಬೇಕಾದ ಏರ್ಪಾಟುಗಳು ನಡೆದವು.

'ಅವರು ಬಹಳ ಪ್ರಸಿದ್ಧ ವಾಗ್ಮಿ. ಆದ್ದರಿಂದ ಅವರ ಕ್ಲಿನಿಕ್‌ಗೇ ಹೋಗಿ ಭೇಟಿಯಾಗೋಣ. ಅವರು ಬಹಳ ಬಿಜಿ ಇರುವುದರಿಂದ ಮನೆಗೆ ಹೋಗಲು ಸಾಧ್ಯವಾಗುತ್ತಿಲ್ಲ...' ಎಂದು ಮಗನನ್ನು ಕ್ಲಿನಿಕ್‌ಗೆ ಕರೆದೊಯ್ಯಲು ಮಾನಸಿಕ ಭೂಮಿಕೆ